

# ಡೆಲ್ಫಿ ಅವಶೇಷಗಳ ವಿಶೇಷ

ಗ್ರೀಸ್‌ನ ಅಥೆನ್ಸ್ ಸಮೀಪದ ಡೆಲ್ಫಿ, ಕ್ರಿಸ್ತಪೂರ್ವ 8ನೇ ಶತಮಾನದಲ್ಲಿ ಧಾರ್ಮಿಕ – ಸಾಂಸ್ಕೃತಿಕ ಕೇಂದ್ರವಾಗಿ ಪ್ರಸಿದ್ಧವಾಗಿತ್ತು. ಕಾಲಾನಂತರ ಭೂಗರ್ಭದಲ್ಲಿ ಹುದುಗಿಹೋದ ಈ ನಗರ ಈಗ ಉತ್ಖನನದಿಂದ ಹೊರಬಂದಿರುವ ತನ್ನ ಗತವೈಭವದ ಅವಶೇಷಗಳಿಂದ ಗಮನಸೆಳೆಯುತ್ತಿದೆ.

**■ ಸುಚೇತಾ ಕೆ. ನಾರಾಯಣ**

ಚಿತ್ರಗಳು: ಅನೂಪ್ ಕೆ.ಎಸ್.

ಪಾಶ್ಚಿಮಾತ್ಯ ನಾಗರಿಕತೆಯ ತೊಟ್ಟಿಲು ಎಂದು ಹೆಸರಾದ ಗ್ರೀಸ್ ದೇಶ ಸಾಕ್ರೆಟೀಸ್, ಪ್ಲೇಟೊ, ಅರಿಸ್ಟಾಟಲ್‌ರಂತಹ ದಾರ್ಶನಿಕರಿಗೆ ಜನ್ಮವಿತ್ತ ಭೂಮಿ. ಅಲೆಕ್ಸಾಂಡರ್‌ನಂತಹ ಮಹಾ ಸಾಹಸಿಯ ತವರು ನೆಲ. ಪ್ರಜಾಪ್ರಭುತ್ವವನ್ನು ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಸಹ ಗ್ರೀಕರಿಗೆ ಸಲ್ಲುತ್ತದೆ. ವಿಶ್ವ ಪ್ರಸಿದ್ಧ ಒಲಿಂಪಿಕ್ ಆಟಗಳನ್ನು ಪ್ರಾರಂಭಿಸಿದವರೂ ಇವರೇ! ಇಂದಿಗೂ ಒಲಂಪಿಕ್ ಆಟಗಳು ಆರಂಭವಾಗುವ ಮೊದಲು ಬೆಳಗಿಸುವ ಒಲಂಪಿಕ್ ಜ್ಯೋತಿಯನ್ನು ತರುವುದು ಗ್ರೀಸ್ ದೇಶದ ಒಲಂಪಿಯಾ ಎಂಬ ಸ್ಥಳದಿಂದ. ಸಹಸ್ರಮಾನಗಳಷ್ಟು ಸಮೃದ್ಧ ಇತಿಹಾಸ ಹೊಂದಿರುವ ಈ ದೇಶವೆಂದರೆ ಮೊದಲಿಂದಲೂ ನನಗೇನೋ ಸೆಳೆತ. ಚರಿತ್ರೆಯ ಪುಟಗಳಲ್ಲಿ ವಿಜೃಂಭಿಸಿದ ಅಲ್ಲಿನ ಐತಿಹಾಸಿಕ ಸ್ಥಳಗಳಿಗೊಮ್ಮೆ ಭೇಟಿ ನೀಡಬೇಕೆಂಬುದು ಬಹುದಿನಗಳ ಆಸೆಯಾಗಿತ್ತು. ಹೀಗಾಗಿ ಚಳಿಗಾಲ ಕಳೆದು ಈಸ್ಟರ್ ರಜೆ ಸಿಕ್ಕಾಗ ಯವನರ ನಾಡಿನೆಡೆಗೆ ಹಾರಿದ್ದೆವು.

ಗ್ರೀಸ್‌ನ ರಾಜಧಾನಿ ಅಥೆನ್ಸ್ ತಲುಪಿದಾಗ ಸಂಜೆ ಸಮೀಪಿಸುತ್ತಿತ್ತು. ಮಳೆ ಬಿಟ್ಟೂಬಿಡದೆ ಸುರಿಯುತ್ತಿತ್ತು. ಮಳೆಯ ನೀರು ರಸ್ತೆಯ ಮೇಲೆಲ್ಲಾ ಹರಿದು ನಿಂತದ್ದು ನೋಡಿ ಬೆಂಗಳೂರು ನೆನಪಾಗಿತ್ತು. ಯುರೋಪ್‌ನ ಬಹಳಷ್ಟು

